ಹೊರತುಪಡಿಸಿ) ಪೂರ್ಣಗೊಳಿಸಲಾಗುವುದು.

ಚಿಕ್ಕಬಳ್ಳಾಪುರ ನಗರದಲ್ಲಿ ಒಳಚರಂಡಿ ನಿರ್ಮಾಣ.

2971(3625)

ಶ್ರೀಮತಿ ಅನುಸೂಯಮ್ಮ ನಟರಾಜನ್ ಕೆ.ಎ.(ಚಿಕ್ಕಬಳ್ಳಾಪುರ): ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

1. ಚಿಕ್ಕಬಳ್ಳಾಪುರ ನಗರದಲ್ಲಿ ಸುಮಾರು 60 ಸಾವಿರ ಜನಸಂಖ್ಯೆಯಿದ್ದು, ನಗರ ನೈರ್ಮಲ್ಯ ಕಾಪಾಡುವುದಕ್ಕೆ ಒಳಚರಂಡಿ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಹಾಗಿದ್ದಲ್ಲಿ ಚಿಕ್ಕಬಳ್ಳಾಪುರ ನಗರದಲ್ಲಿ ಒಳಚರಂಡಿ ನಿರ್ಮಾಣ ಮಾಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಎಸ್.ಎಂ.ಕೃಷ್ಣ(ಮುಖ್ಯ ಮಂತ್ರಿಯವರು):

1. ಬಂದಿದೆ.

2. ಒಳಚರಂಡಿ ಯೋಜನೆಯ ಸರ್ವೆ ಕೆಲಸವನ್ನು ಕೈಗೊಂಡು ಅಂದಾಜು ಪಟ್ಟಿಯನ್ನು ಮಂಡಲಿಯು ತಯಾರಿಸುವ ಹಂತದಲ್ಲಿದೆ.

ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಹಣ ಬಿಡುಗಡೆ.

2973(3788)

ಶ್ರೀ ಎಸ್.ಅಂಗಾರ್(ಸೂಳ್ಯ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

ಅ) ಕಳೆದ ಎರಡು ವರ್ಷಗಳಿಂದ ಯಾವ ಯಾವ ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ ಸರ್ಕಾರದಿಂದ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ? (ಜಿಲ್ಲಾವಾರು ವಿವರ ನೀಡುವುದು)

ಶ್ರೀ ಬಾಬುರಾವ್ ಬಸವಣಿಪ್ಪ ಚಿಂಚಸನೂರ್: (ಮುಜರಾಯಿ ರಾಜ್ಯ ಸಚಿವರು):

ಅ) ದೇವಾಲಯಗಳ ಜೀರ್ಣೋದ್ಧಾರಕ್ಕೆ ಕಳೆದ 2 ವರ್ಷಗಳಲ್ಲಿ ಬಿಡುಗಡೆ ಮಾಡಿದ ಅನುದಾನದ ವಿವರ ಈ ಕೆಳಕಂಡಂತಿದೆ.

ಜಿಲ್ಲೆ	ಸಂಸ್ಥೆ ಸಂಖ್ಯೆ	99-2000 (ರೂ. ಲಕ್ಷಗಳಲ್ಲಿ)	ಸಂಸ್ಥೆ ಸಂಖ್ಯೆ	2000 -01 ರೂ.ಲಕ್ಷ ಗಳಲ್ಲಿ)
1) ಬೆಂಗಳೂರು ನಗರ	4	4.30	12	6.00
2) ಬೆಂಗಳೂರು ಗ್ರಾ.	14	7.00	16	6.10
3) ಮೈಸೂರು	7	3.00	11	5.50
4) ಕೋಲಾರ	34	8.75	15	6.90
5) ತುಮಕೂರು	15	5.80	15	5.45
6) ಮಂಡ್ಯ	21	8.00	23	9.50
7) ಹಾಸನ	5	4.15	15	6.75
8) ಶಿವಮೊಗ್ಗ	8	4.25	4	2.00
9) ಚಿತ್ರದುರ್ಗ	4	1.00	2	0.60
10) ಚಿಕ್ಕಮಗಳೂರು	6	3.25	8	3,70
11) ದಾವಣಗೆರೆ	9	2.55	2	0.80
12) ಕೊಡಗು	10	9.50	5	3.50
13) ದಕ್ಷಿಣ ಕನ್ನಡ	11	14.00	14	8.00
14) ಬಳ್ಳಾರಿ	9	3.90	2	1.00

15) ಉಡುಪಿ	4	3.25	24	21.00
16) ಚಾಮರಾಜನಗರ	5	1.20	1	0.40
17) ಬೆಳಗಾಂ	9	3.55	8	3.50
18) ಧಾರವಾಡ	1	0.25	2	0.50
19) ಬಿಜಾಪುರ	3	2.00	5	3.00
20) ಉತ್ತರ ಕನ್ನಡ	10	3.70	5	2.10
21) ಬಾಗಲಕೋಟೆ	6	2.05	2	1.00
22) ಹಾವೇರಿ	5	1.50	2	1.50
23) ಗದಗ್	5	2.25	3	1.50
24) ರಾಯಚೂರು	6	1.50	4	1.60
25) ಕೊಪ್ಪಳ	2	1.50	2	0.60
26) ಬೀದರ್	14	3.75	3	1.50
27) ಗುಲ್ಬರ್ಗಾ	14	20,05	32	22.00
ಒಟ್ಟು	**241**	**126.00**	**237**	**126.00**

ಉತ್ತರಹಳ್ಳಿ ಕ್ಷೇತ್ರದ ಈಜಿಪುರದ ಮಹಾನಗರ ವ್ಯಾಪ್ತಿಗೆ ಸೇರಿದ ಪ್ರದೇಶಕ್ಕೆ ಕುಡಿಯುವ ನೀರಿನ ಸಮಸ್ಯೆ.

2975(3722)

ಶ್ರೀ ಅಂಜನಮೂರ್ತಿ(ನೆಲಮಂಗಲ): ಮಾನ್ಯ ಮುಖ್ಯ ಮಂತ್ರಿಯವರು ಈ ಕಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

1. ಉತ್ತರಹಳ್ಳಿ ಕ್ಷೇತ್ರದ ಈಜಿಪುರ ಮಹಾನಗರ ವ್ಯಾಪ್ತಿಗೆ ಸೇರಿ 6